## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು

## ಸಿ.ಸಿ. ಸಂಖ್ಯೆ 823/2021

ಫಿರ್ಯಾದಿದಾರರುಃ ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು ಃ

1. ರಾಜು ಬಿನ್ ಬೆಟ್ಟಯ್ಯ,
ಸುಮಾರು 68 ವರ್ಷ ವಯಸ್ಸು,
2. ಶಾರದಮ್ಮ ಕೋಂ ರಾಜು,
ಸುಮಾರು 65 ವರ್ಷ ವಯಸ್ಸು,
3. ರಘುನಾಥ ಬಿನ್ ಲೇಟ್. ಚಲುವಯ್ಯ,
ಸುಮಾರು 43 ವರ್ಷ ವಯಸ್ಸು,
4. ನಾರಾಯಣ ಬಿನ್ ಚಲುವಯ್ಯ,
ಸುಮಾರು 58 ವರ್ಷ ವಯಸ್ಸು,
5. ಲೀಲಾವತಿ ಕೋಂ ನಾರಾಯಣ,
ಸುಮಾರು 40 ವರ್ಷ ವಯಸ್ಸು,
6. ಜ್ಯೋತಿ ಕೋಂ ನಾರಾಯಣ,
ಸುಮಾರು 40 ವರ್ಷ ವಯಸ್ಸು,

ಎಲ್ಲರ ವಾಸಃ ಚಿಕ್ಕುಂದ ಗ್ರಾಮ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿಃ 21.06.2020 ರಂದು ಮಧ್ಯಾಹ್ನ ಸುಮಾರು 12.30 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಚಿಲ್ಕುಂದ ಗ್ರಾಮದ ಸಾಕ್ಷಿ-2 ಶಿವಕುಮಾರ ರವರ ತಾಯಿಯಾದ ಚನ್ನಮ್ಮರವರ ಹೆಸರಿನಲ್ಲಿರುವ ಪಂಚಾಯ್ತಿ ಆಸ್ತಿ ನಂ.574 ಹಾಗೂ ಅಸೆಸ್‌ಮೆಂಟ್ ನಂ.869 ರಲ್ಲಿ ಪೂರ್ವ-ಪಶ್ಚಿಮ 47 ಅಡಿ ಹಾಗೂ ಉತ್ತರ-ದಕ್ಷಿಣ 68 ಅಡಿ ಖಾಲಿ ನಿವೇಶನದ ಜಾಗಕ್ಕೆ ಸಾಕ್ಷಿ-1 ಚಂದ್ರಿಕಾ, ಸಾಕ್ಷಿ-2 ಶಿವಕುಮಾರ, ಸಾಕ್ಷಿ-3 ಜಯಶೀಲ ರವರು ನಲ್ಲಿ ಹಾಕಲು ಪೈಪ್ ಲೈನ್ ಮಾಡುತ್ತಿದ್ದ ಸಮಯದಲ್ಲಿ, 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, 1 ಮತ್ತು 2 ನೇ ಆರೋಪಿಗಳಾದ ನೀವು ಬಂದು ಇಲ್ಲಿ ಏಕೆ ತಂತಿ ಬೇಲಿ ಹಾಕಿ ನಲ್ಲಿ ಪೈಪುಗಳನ್ನು ಹಾಕುತ್ತಿದ್ದೀರಾ ಎಂದು ಗಲಾಟೆ ಮಾಡಿ ತಂತಿ ಕಂಬಗಳನ್ನು ಬೀಳಿಸಿ ತಂತಿಯ ಮೇಲೆ ಕಲ್ಲುಗಳನ್ನು ಎತ್ತಿ ಹಾಕಿ ಧ್ವಂಸ ಮಾಡಿ ಸುಮಾರು ರೂ.1000/- ಗಳಷ್ಟು ನಷ್ಟ ಉಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, 3 ಮತ್ತು 4 ನೇ ಆರೋಪಿಗಳಾದ ನೀವು ಸಾಕ್ಷಿ -1 ರವರ ನೈಟಿಯನ್ನು ಹರಿದು ಹಾಕಿ ಸಾಕ್ಷಿ-1 ರವರಿಗೆ ಅವಮಾನ ಪಡಿಸಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, ಸಾಕ್ಷಿ-2 ಮತ್ತು 3 ರವರು ಮನೆಗೆ ಹೋಗಿದ್ದ ಸಮಯದಲ್ಲಿ ಆರೋಪಿತರೆಲ್ಲರೂ ಸೇರಿಕೊಂಡು ಏಕಾಏಕಿ ಸಾಕ್ಷಿ-1 ರವರ ಜೊತೆ ಗಲಾಟೆ ಮಾಡಿ , 1 ನೇ ಆರೋಪಿಯಾದ ನೀವು ಕೈಯಿಂದ ಸಾಕ್ಷಿ-1 ರವರ ಎದೆಗೆ ಹೊಡೆದಿದ್ದು, 3 ಮತ್ತು 4 ನೇ ಆರೋಪಿಗಳಾದ ನೀವು ಸಾಕ್ಷಿ -1 ರವರನ್ನು ಕೆಳಗೆ ಕೆಡವಿಕೊಂಡು ತಮ್ಮ ತಮ್ಮ ಕಾಲುಗಳಿಂದ ಮೈಕೈಗೆ ಒದ್ದು ಸಾಕ್ಷಿ-1 ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರೆಂದು, ಆ

ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ನಾಲ್ಕನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, 5 ಮತ್ತು 6 ನೇ ಆರೋಪಿಗಳಾದ ನೀವು ಸಾಕ್ಷಿ-1 ರವರಿಗೆ ನೀನು ಗಂಡನ ಮನೆಯಿಂದ ಓಡಿ ಬಂದಿದ್ದೀಯಾ ಲೋಪರ್ ಮುಂಡೆ, ಕೆಟ್ಟ ಮುಂಡೇ, ಗಂಡ ಬಿಟ್ಟೋಳು ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, ಎಲ್ಲರೂ ಸೇರಿಕೊಂಡು ಸಾಕ್ಷಿ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಮನು ಪಟೇಲ್ ಬಿ.ವೈ.)**

ದಿನಾಂಕಃ **25.09.2023**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.